# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜುಲೈ 2018**, ಬೆಂಗಳೂರು, ಸಂಪುಟ 4, ಸಂಚಿಕೆ 3, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 July 2018**, Bangaluru, Vol. 4, No.3, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription : Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

| | |
|---|---|
| ದಹರಾ ಚ ಹಿ ವುದ್ಧಾ ಚ,<br>ಯೇ ಬಾಲಾ ಯೇ ಚ ಪಂಡಿತಾ;<br>ಅಡ್ಢಾ ಚೆವಾ ದಾಲಿದ್ದಾ ಚ,<br>ಸಬ್ಬೇ ಮಚ್ಚುಪರಾಯಣಾ. | ಯುವಕರು ಮತ್ತು ಮುದುಕರು,<br>ಬುದ್ಧಿವಂತರು ಮತ್ತು ಮೂರ್ಖರು,<br>ಶ್ರೀಮಂತರು ಮತ್ತು ಬಡವರು,<br>ಎಲ್ಲರೂ ಸಾವಿನ ಅಂತಿಮ ನಿಯಮಕ್ಕೊಳಪಟ್ಟಿರುತ್ತಾರೆ. |

**– ಜಾ 461, ದಶರಥ ಜಾತಕ**

## ಖಂತಿ ಪಾರಮಿ ಬೆಳೆಯಲಿ

**ಪ್ರಧಾನ ಆಚಾರ್ಯ ಎಸ್.ಎನ್. ಗೋಯಂಕ (1924–2013)**

(ನವೆಂಬರ್, 2015 ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ)

***ಪಾರಮೀ*** ಅಥವಾ ***ಪಾರಮಿತಾ*** (ಪರಿಪೂರ್ಣತೆ) ಎಂದರೆ ಪಕ್ವವಾಗಿರುವಂತಹುದು, ಪೂರ್ತಿಯಾಗಿ ಬೆಳೆದಿರುವಂತಹುದು ಮತ್ತು ಪರಿಪೂರ್ಣತೆಯನ್ನು ತಲುಪಿರುವಂತಹುದು. ಮನಸ್ಸಿನ ಹತ್ತು ಒಳ್ಳೆಯ ಗುಣಗಳು, ***ಪಾರಮಿ***ಗಳು, ಇವೆ. ಇವುಗಳನ್ನು ಸಂಪೂರ್ಣವಾಗಿ ಪಾಲಿಸಿದರೆ ಅಥವಾ ಪಕ್ವವಾಗಿಸಿದರೆ ಇವು ಬೋಧಿಸತ್ವನಿಗೆ ಬುದ್ಧತ್ವ ಪ್ರಾಪ್ತಿಯ ವಾಗ್ದಾನ ನೀಡುತ್ತವೆ; ಮತ್ತು ನಮ್ಮೆಲ್ಲರಿಗೂ ಇವು ಅಂತಿಮ ಮುಕ್ತಿಯನ್ನು ತಲುಪಲು ಸಹಾಯಮಾಡುತ್ತವೆ.

ಹತ್ತು ಪರಿಪೂರ್ಣತೆಗಳಲ್ಲಿ, ***ಖಂತಿ ಪಾರಮೀ***, ಅಂದರೆ ತಾಳ್ಮೆ ಅಥವಾ ಸಹನೆಯ ಗುಣ ವಿಶೇಷ ಪ್ರಾಮುಖ್ಯತೆ ಹೊಂದಿದೆ. ಜೀವನದ ಅತ್ಯಂತ ಕ್ರೂರ ಸನ್ನಿವೇಶಗಳನ್ನು ಸಹನೆಯಿಂದ, ಶಾಂತಿಯಿಂದ, ವಸ್ತುನಿಷ್ಠವಾಗಿ ತಾಳಿಕೊಳ್ಳುವ ಶಕ್ತಿ; ಜೀವನದಲ್ಲಿ ಸಹಿಸಲಾಗದ ಘಟನೆಯ ನೋವನ್ನು ಸಹಿಸುವುದು ಅಥವಾ ಹತ್ತಿರದ ಪ್ರೀತಿ ಪಾತ್ರ ವ್ಯಕ್ತಿಯ ಸಾವನ್ನು ದುಗುಡವಿಲ್ಲದ, ಶಾಂತ ಮನಸ್ಸಿನಿಂದ ತಾಳಿಕೊಳ್ಳುವುದು, ತನ್ನ ಅಂತರಾಳದಲ್ಲಿ ಎಲ್ಲಾ ಸಮಯದಲ್ಲೂ ಸಮಚಿತ್ತತೆಯನ್ನು ಕಾಪಾಡಿಕೊಳ್ಳಲು ಶಕ್ತವಾಗುವುದು – ಇದು ತಾಳ್ಮೆ ಪಾರಮಿಯ ಬೇಡಿಕೆಗಳನ್ನು ಪೂರೈಸುವ ರೀತಿ.

ತನ್ನ ***ಪಾರಮಿತಾ***ಗಳನ್ನು ಉನ್ನತ ಮಟ್ಟದಲ್ಲಿ ಪೂರೈಸಿದ, ಗೌತಮ ಬುದ್ಧರ ಹೆಸರಿನಿಂದ ***ಸಮ್ಮಾಸಂಬುದ್ಧ***ರಾದ (ಸಂಪೂರ್ಣ ಜ್ಞಾನೋದಯ ಪಡೆದ), ಬೋಧಿಸತ್ವರು ತನ್ನ ಹಿಂದಿನ ಜನ್ಮಗಳಲ್ಲಿ ತಾಳ್ಮೆಯ ಈ ***ಪಾರಮೀ***ಯನ್ನು ಪೂರೈಸುವಲ್ಲಿ ಯಶಸ್ವಿಯಾಗಿದ್ದರು.

### ಮಗನ ಸಾವು

ತನ್ನ ಅನೇಕ ಜನ್ಮಗಳಲ್ಲಿ ಒಮ್ಮೆ ಬೋಧಿಸತ್ವನು ವಾರಾಣಾಸಿಯಲ್ಲಿ ಒಬ್ಬ ಬ್ರಾಹ್ಮಣನಾಗಿ ಜನಿಸಿದ್ದ. ಬೆಳೆದು ದೊಡ್ಡವನಾದ ಮೇಲೆ ತನ್ನ ಕುಟುಂಬದ ಮುಖ್ಯಸ್ಥನಾದ. ತನ್ನ ಕುಟುಂಬದಲ್ಲಿ ತನ್ನ ಹೆಂಡತಿ, ಮಗಳು, ಮಗ ಮತ್ತು ಅವನ ಹೆಂಡತಿ, ಮತ್ತು ಒಬ್ಬ ಸೇವಕಿ ಇದ್ದರು. ಕುಟುಂಬವು ಸಂತೋಷ ಮತ್ತು ತೃಪ್ತಿಯಿಂದಿತ್ತು. ಬೋಧಿಸತ್ವನು ತನ್ನ ಮಗನ ಯೋಗ್ಯ ಸಹಾಯದಿಂದ ವ್ಯವಸಾಯ ಮಾಡುತ್ತಾ ತನ್ನ ಕುಟುಂಬ ನಿರ್ವಹಿಸುತ್ತಿದ್ದ.

ಒಂದು ದಿನ ಬೋಧಿಸತ್ವನು ತನ್ನ ಹೊಲದಲ್ಲಿ ಉಳುಮೆ ಮಾಡುತ್ತಿದ್ದ. ಮಾಮೂಲಿನಂತೆ ತನ್ನ ಮಗ ನೇಗಿಲಿನಿಂದ ಹೊರ ಬಂದ ಒಣ ತ್ಯಾಜ್ಯವನ್ನು ಸುಡುವುದಕ್ಕಾಗಿ ಒಟ್ಟು ಮಾಡುತ್ತಿದ್ದ. ಈ ತ್ಯಾಜ್ಯದ ಗುಡ್ಡೆಯಿಂದ ಒಂದು ಭಯಾನಕ ನಾಗರಹಾವು ಇದ್ದಕ್ಕಿದ್ದಂತೆ ಹೆಡೆ ಎತ್ತಿ ಯುವಕನನ್ನು ಕಚ್ಚಿತು. ವಿಷ ಹರಡಿ ಯುವಕ ಪ್ರಜ್ಞೆ ತಪ್ಪಿ ಬಿದ್ದ. ತನ್ನ ಮಗ ಬೀಳುವುದನ್ನು ನೋಡಿದ ಬೋಧಿಸತ್ವ ತನ್ನ ಮಗನ ಬಳಿಗೆ ಓಡಿದ. ಆದರೆ ಅಷ್ಟೊತ್ತಿಗೆ ಮಗನ ಜೀವ ಹೋಗುತ್ತಿತ್ತು. ತನ್ನ ಮಗನನ್ನು ರಕ್ಷಿಸಲು ಬೋಧಿಸತ್ವನು ಮಾಡಿದ ಪ್ರಯತ್ನ ವಿಫಲವಾಯಿತು. ಬದುಕಿಸಿಕೊಳ್ಳಲು ವಿಫಲನಾದ ಮೇಲೆ, ತನ್ನ ಮಗನ ದೇಹವನ್ನು ಒಂದು ಮರದ ಕೆಳಗೆ ಮಲಗಿಸಿ ಅದರ ಮೇಲೆ ಒಂದು ಬಟ್ಟೆಯನ್ನು ನಯವಾಗಿ ಹೊದಿಸಿದ. ಯಾವುದೇ ನೋವು ಅಥವಾ ಸಂಕಟವಿಲ್ಲದೆ ಶಾಂತವಾಗಿ ತನ್ನ ಹೊಲ ಉಳುವ ಕೆಲಸವನ್ನು ಮತ್ತೆ ಮುಂದುವರಿಸಿದ.

ಸ್ವಲ್ಪ ಸಮಯದ ನಂತರ, ತಾನು ವಾಸವಾಗಿದ್ದ ಪಟ್ಟಣದ ಕಡೆಗೆ ಒಬ್ಬ ರೈತ ಹೋಗುತ್ತಿರುವುದನ್ನು ಕಂಡ. ತನ್ನ ಹೆಂಡತಿಗೆ ಒಂದು ಮಾಹಿತಿಯನ್ನು ನೀಡಲು ಬೋಧಿಸತ್ವನು ಅವನನ್ನು ವಿನಂತಿಸಿಕೊಂಡ. ಪ್ರತಿದಿನ ಇಬ್ಬರಿಗೆ ಮಧ್ಯಾಹ್ನದ ಊಟ ತರುತ್ತಿದ್ದ ಸೇವಕಿಯು ಇಂದು ಒಬ್ಬರಿಗೆ ಮಾತ್ರ ಮಧ್ಯಾಹ್ನದ ಊಟ ತರಲಿ. ಶುದ್ಧ ಮತ್ತು ಶುಭ್ರ ವಸ್ತ್ರ ಧರಿಸಿ, ಹೂವುಗಳೊಂದಿಗೆ ಇಡೀ ಕುಟುಂಬದವರು ಹೊಲಕ್ಕೆ ಬರಲು ಹೇಳಿ ಎಂದು ಅವನನ್ನು ವಿನಂತಿಸಿಕೊಂಡ. ಇದನ್ನು ಕೇಳಿದ ಹೆಂಡತಿಯು ಬಹುಶಃ ತನ್ನ ಮಗ ಸತ್ತಿರಬಹುದೆಂದು ಅರ್ಥಮಾಡಿಕೊಂಡಳು. ಆದರೆ ಆಕೆ ದುಃಖದಿಂದ ಸ್ಫೋಟಗೊಳ್ಳಲಿಲ್ಲ. ಕುಟುಂಬದ ಇತರ ಸದಸ್ಯರೂ ದುಃಖಿಸಲಿಲ್ಲ. ಶಾಂತಿ ಮತ್ತು ಸಮಾಧಾನದಿಂದ ಅವರು ಹೊಲದ ಕಡೆ ನಡೆದರು.

ಒಬ್ಬ ಬೋಧಿಸತ್ವನು ತನ್ನ ಪ್ರತಿಯೊಂದು ಜನ್ಮದಲ್ಲಿಯೂ ಧರ್ಮದ ಜೀವನ ನಡೆಸುವುದನ್ನು ಮುಂದುವರಿಸುತ್ತಾನೆ ಮತ್ತು ಒಂದು ಅಥವಾ ಹೆಚ್ಚು ***ಪಾರಮಿ***ಗಳನ್ನು ಪಕ್ವಗೊಳಿಸಿಕೊಳ್ಳುವ ಕಡೆಗೆ ಕೆಲಸಮಾಡುತ್ತಾನೆ. ವಾಸ್ತವವಾಗಿ ಬೋಧಿಸತ್ವರು ತಾವಷ್ಟೇ ಧರ್ಮದ ಜೀವನವನ್ನು ನಡೆಸುವುದಿಲ್ಲ. ಸ್ನೇಹಿತರು ಮತ್ತು ಕುಟುಂಬದವರೂ ಧರ್ಮದ ಜೀವನವನ್ನು ನಡೆಸುವಂತೆ ಪ್ರೋತ್ಸಾಹಿಸುತ್ತಾರೆ ಮತ್ತು ಪ್ರೇರೇಪಿಸುತ್ತಾರೆ. ಮುಂದೊಂದು ಜನ್ಮದಲ್ಲಿ ಬೋಧಿಸತ್ವರು ಬುದ್ಧರಾದಾಗ ಲೆಕ್ಕವಿಲ್ಲದಷ್ಟು ಜನಗಳನ್ನು ಸಂಪೂರ್ಣ ಮುಕ್ತಿಯ ಮಾರ್ಗಕ್ಕೆ ತರುವ ಗುರುತರವಾದ ಕೆಲಸದಲ್ಲಿ ತೊಡಗಬೇಕಾಗಿದೆ. ಆದ್ದರಿಂದ ಬೋಧಿಸತ್ವರಾಗಿ ಹುಟ್ಟುವ ಲೆಕ್ಕವಿಲ್ಲದಷ್ಟು ಜನ್ಮಗಳಲ್ಲಿ ಇತರರಿಗೆ ಧರ್ಮದ ಮಾರ್ಗದರ್ಶನ ಮಾಡುವ ಕಲೆಯಲ್ಲೂ ಸಹ ಅವರು ಪಕ್ವವಾಗುತ್ತಾರೆ.

ಕುಟುಂಬ ಸದಸ್ಯರು ತಮ್ಮ ಪ್ರಾಪಂಚಿಕ ಗೃಹಸ್ಥರ ಕೆಲಸಗಳನ್ನು ಮಾಡುವಾಗಲೂ ಅವರು ಪರಿಶುದ್ಧ ಧರ್ಮದ ಜೀವನ ನಡೆಸುವಂತೆ ಅವರಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ಬೋಧಿಸತ್ವರು ನೀಡುತ್ತಿದ್ದರು. ತಾವೇ ಆದರ್ಶ ಪ್ರಾಯವಾದ ಧರ್ಮದ ಜೀವನ ನಡೆಸಿ ಇತರರನ್ನೂ ಪ್ರೇರೇಪಿಸಿದರು. ಶೀಲವಂತ ಜೀವನ ನಡೆಸಲು ಮತ್ತು ಕರುಣೆ ಮತ್ತು ಸಂತೋಷ ತುಂಬಿದ ಮನಸ್ಸುಗಳಿಂದ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದಾನ ಕೊಡಲು ಯಾವಾಗಲೂ ಅವರು ತಮ್ಮ ಕುಟುಂಬದ ಸದಸ್ಯರಿಗೆ ಮಾರ್ಗದರ್ಶನ ನೀಡುತ್ತಿದ್ದರು. ತಮ್ಮ ಮನಸ್ಸುಗಳನ್ನು ಶಿಸ್ತಿಗೊಳಪಡಿಸಿ

ಮತ್ತು ನಿರಂತರವಾಗಿ ಉದಯವಾಗುವ ಮತ್ತು ನಾಶವಾಗುವ ಅಶಾಶ್ವತತೆಯ ಬಗ್ಗೆ ಅರಿವನ್ನು ವೃದ್ಧಿಮಾಡಿಕೊಂಡು, ಮನಃಶುದ್ಧಿ ಮಾಡಿಕೊಳ್ಳುವ ಕೆಲಸವನ್ನು ತಪ್ಪದೆ ಮಾಡುವಂತೆಯೂ ಅವರನ್ನು ಪ್ರೋತ್ಸಾಹಿಸುತ್ತಿದ್ದರು.

ಹುಟ್ಟಿದವರು ಸಾಯಲೇಬೇಕು. ಇದು ಅನಿವಾರ್ಯ. ಇದು ಬದಲಾಯಿಸಲು ಸಾಧ್ಯವಿಲ್ಲದ ಪ್ರಕೃತಿಯ ನಿಯಮ. ಈ ನಿಯಮವನ್ನು ಅರ್ಥಮಾಡಿಕೊಂಡು ಸನ್ನಿಹಿತವಾದ ಸಾವಿನ ಬಗ್ಗೆ ಆಗಿಂದಾಗ್ಗೆ ಅರಿವನ್ನು ಬಲಪಡಿಸಿಕೊಳ್ಳಲೂ ಅವರು ಕುಟುಂಬ ಸದಸ್ಯರಿಗೆ ಪ್ರೋತ್ಸಾಹಿಸುತ್ತಿದ್ದರು. ಸಾವಿನ ಅರಿವಿನಲ್ಲಿ ಬೋಧಿಸತ್ವರು ಪರಿಪಕ್ವವಾಗಿದ್ದರು. ಅದೇ ರೀತಿ ಈ ಇರುವಿಕೆಯ ಸತ್ಯವನ್ನು ಅರ್ಥಮಾಡಿಕೊಳ್ಳಲು ತನ್ನ ಕುಟುಂಬದ ಸದಸ್ಯರಿಗೂ ಸಹಾಯ ಮಾಡಿದ್ದರು.

ನಾಲ್ಕು ಜನ ಕುಟುಂಬದ ಸದಸ್ಯರು ಜಮೀನಿಗೆ ಬಂದಾಗ, ಅವರ ಗ್ರಹಿಕೆ ನಿಜವಾಗಿತ್ತು. ಆದರೆ ಯುವಕನ ಹೆಣವನ್ನು ನೋಡಿ ಯಾರೊಬ್ಬರೂ ಅಳಲಿಲ್ಲ ಮತ್ತು ಮರುಗಲಿಲ್ಲ. ಸದ್ದಿಲ್ಲದೆ, ಶಾಂತವಾಗಿ ಅಂತ್ಯಕ್ರಿಯೆಗೆ ಸೌದೆ ಸಂಗ್ರಹಿಸತೊಡಗಿದರು. ಎಲ್ಲರೂ ಒಟ್ಟಾಗಿ ಪ್ರೀತಿ ಪಾತ್ರನ ದೇಹವನ್ನು ನಿಧಾನವಾಗಿ ಚಿತೆಯ ಮೇಲಿಟ್ಟರು ಮತ್ತು ಪ್ರೀತಿಯಿಂದ ಅದನ್ನು ಹೂವುಗಳಿಂದ ಅಲಂಕರಿಸಿದರು. ಚಿತೆಗೆ ಬೆಂಕಿ ಹೊತ್ತಿಸಿದ ಮೇಲೆ ಶಾಂತ ಚಿತ್ತರಾಗಿ ಎಲ್ಲರೂ ಸುತ್ತ ಕುಳಿತರು.

ದೂರದಿಂದ ಇದನ್ನೆಲ್ಲಾ ಗಮನಿಸುತ್ತಿದ್ದ ಒಬ್ಬ ವ್ಯಕ್ತಿಯು ಕುಟುಂಬದ ಈ ಸಹನೆಯನ್ನು ನೋಡಿ ಅತ್ಯಾಶ್ಚರ್ಯಪಟ್ಟ. ಅವನು ಹತ್ತಿರ ಬಂದು ಕೇಳಿದ,

'ನೀವು ಒಂದು ಪ್ರಾಣಿಯ ಹೆಣವನ್ನು ಸುಡುತ್ತಿದ್ದೀರಾ?'

'ಇಲ್ಲ, ಒಬ್ಬ ಸತ್ತ ಮನುಷ್ಯನ ದೇಹವನ್ನು ಸುಡುತ್ತಿದ್ದೇವೆ,' ಬೋಧಿಸತ್ವ ಉತ್ತರಿಸಿದರು.

'ಓ, ಹಾಗಾದರೆ ಅವನು ನಿಮ್ಮ ಶತ್ರು;' ಆಗಂತುಕ ವಿಚಾರಿಸಿದ.

'ಇಲ್ಲ, ಅವನು ನನ್ನ ಒಬ್ಬನೇ ಮಗ.'

'ನಿಮ್ಮ ಮಗನ ಜೊತೆ ಒಳ್ಳೆಯ ಸಂಬಂಧವಿರಲಿಲ್ಲವೆ?'

'ನನ್ನ ಮಗ ನನಗೆ ಬಹಳ ಪ್ರೀತಿಪಾತ್ರನಾದವನು,' ರೈತ ಬೋಧಿಸತ್ವ ಹೇಳಿದರು.

'ಹಾಗಾದರೆ ನಿಮ್ಮ ಅತ್ಯಂತ ಪ್ರೀತಿಯ ಮಗನನ್ನು ಕಳೆದುಕೊಂಡು ನೀವೇಕೆ ಅಳುತ್ತಿಲ್ಲ?' ಅಪರಿಚಿತ ವ್ಯಕ್ತಿ ಸಂಶಯಾತ್ಮಕವಾಗಿ ಕೇಳಿದ.

'ಅವನು ಸತ್ತು ಹೋದ, ಅವನನ್ನು ಬದುಕಿಸಲು ಸಾಧ್ಯವಿಲ್ಲ. ಹಾವು ತನ್ನ ಪೊರೆ ಕಳಚಿ ಮುಂದೆ ಹೋಗುವಂತೆ, ನನ್ನ ಮಗನೂ ಅವನ ದೇಹವನ್ನು ಬಿಟ್ಟು ಮುಂದೆ ನಡೆದಿದ್ದಾನೆ. ಅಳುವುದರಿಂದ ನಾನು ಏನನ್ನು ಗಳಿಸುತ್ತೇನೆ? ಅವನು ಎಂದಿಗೂ ಮರಳಿ ಬರುವುದಿಲ್ಲ.'

ಅಪರಿಚಿತ ವ್ಯಕ್ತಿಯು ಇದೇ ಪ್ರಶ್ನೆಯನ್ನು ಸತ್ತ ಯುವಕನ ತಾಯಿಗೂ ಕೇಳಿದ. 'ತಂದೆಯ ಹೃದಯ ಕಲ್ಲಿನಷ್ಟು ಗಟ್ಟಿಯಾಗಿರಬಹುದು. ಆದರೆ ನೀವು ಅವನನ್ನು 9 ತಿಂಗಳು ಹೊತ್ತಿದ್ದೀರಿ, ಎದೆ ಹಾಲು ಉಣಿಸಿ ಸಾಕಿದ್ದೀರಿ. ಮಾತೃ ಹೃದಯ ಬಹಳ ಮೃದು. ಆದರೆ ಇದ್ದ ಒಬ್ಬನೇ ಒಬ್ಬ ಮಗನನ್ನು ಕಳೆದುಕೊಂಡ ನೀವು ಅಳದೇ ಇರುವುದು ಹೇಗೆ?' ಆಗಂತುಕ ಕೇಳಿದ.

ಅಪರಿಚಿತ ವ್ಯಕ್ತಿಯು ಅದೇ ಪ್ರಶ್ನೆಗಳನ್ನು ಸತ್ತ ವ್ಯಕ್ತಿಯ ಹೆಂಡತಿಗೆ ಕೇಳಿದ. 'ಈ ಚಿಕ್ಕ ವಯಸ್ಸಿನಲ್ಲಿ ನೀನು ನಿಜವಾಗಿಯೂ ಎಲ್ಲವನ್ನೂ ಕಳೆದುಕೊಂಡಿದ್ದೀಯ. ಆದರೂ ನೀನು ಅಳುತ್ತಿಲ್ಲ?' ನಂತರ ಅವನು ತಂಗಿಯನ್ನು ಪ್ರಶ್ನಿಸಿದ. 'ತಂಗಿಯೂ ಅಣ್ಣನನ್ನು ಬಹಳ ಆಳವಾಗಿ ಪ್ರೀತಿಸುತ್ತಾಳೆ. ಆದರೆ ಇದ್ದ ಒಬ್ಬನೇ ಅಣ್ಣನನ್ನು ಕಳೆದುಕೊಂಡು ನೀನು ದುಃಖಿಸುತ್ತಿಲ್ಲವೇಕೆ?' ನಂತರ ಸೇವಕಿಗೆ ಅವನು ಹೇಳಿದ, 'ಖಂಡಿತವಾಗಿಯೂ ಸತ್ತ ವ್ಯಕ್ತಿಯು ನಿನ್ನ ಜೊತೆ ಒರಟಾಗಿ ನಡೆದುಕೊಳ್ಳುತ್ತಿದ್ದಿರಬಹುದು. ಅವನ ಸಾವಿನಿಂದ ನಿನಗೆ ದುಃಖವಾಗಿಲ್ಲ.'

'ಅವನು ಕುಟುಂಬದ ಸ್ನೇಹಪರವಾದ ಮತ್ತು ಮೃದು ಮಾತಿನ ಮಗ. ಎಲ್ಲರಿಗೂ ಪ್ರೀತಿಪಾತ್ರನಾದವನು. ಎಲ್ಲರೊಡನೆಯೂ ಅವನ ನಡವಳಿಕೆ ವಿನಯವಾಗಿ ಮತ್ತು ಪ್ರೀತಿಯಿಂದಿರುತ್ತಿತ್ತು. ಅವನು ಬಹಳ ಒಳ್ಳೆಯ ವ್ಯಕ್ತಿ.'

'ಆದರೆ ಯಾರೂ ಅಳಲಿಲ್ಲ?' ಅಪರಿಚಿತ ವ್ಯಕ್ತಿ ನಿಜವಾಗಿಯೂ ದಿಗ್ಭ್ರಾಂತನಾದ.

ಅವನ ಗಲಿಬಿಲಿಯನ್ನು ಕಂಡು, ಅಳುವುದರಿಂದ, ರೋದಿಸುವುದರಿಂದ ಅವರಿಗೇನೂ ಬರುವುದಿಲ್ಲ ಎಂಬ ಒಂದೇ ಅಭಿಪ್ರಾಯವನ್ನು ಕುಟುಂಬದ ಎಲ್ಲಾ ಸದಸ್ಯರೂ ವ್ಯಕ್ತಪಡಿಸಿದರು. ಕರೆಯದೆ ಅವನು ಬಂದಿದ್ದ ಮತ್ತು ಯಾರಿಗೂ ಹೇಳದೆ ಇದ್ದಕ್ಕಿದಂತೆ ಹೊರಟು ಹೋದ. ಸಾವು ಖಚಿತ. ಎಲ್ಲಾ ಜೀವಿಗಳು ಅವುಗಳ ಕರ್ಮಾನುಸಾರ ಹುಟ್ಟಿರುತ್ತವೆ ಮತ್ತು ಅವುಗಳ ಕರ್ಮಾನುಸಾರ ಸಾಯುತ್ತವೆ.

***ಯಥಾಗತೊ ತಥಾ ಗತೊ, ತತ್ಥ ಕಾ ಪರಿದೇವನಾ?***

ಅವನು ಹೇಗೆ ಬಂದನೋ, ಹಾಗೆಯೇ ಹೊರಟು ಹೋದ – ಆದ್ದರಿಂದ ದುಃಖಿಸುವುದಕ್ಕೆ ಏನಿದೆ? (ಥೇರೀಗಾಥಾ 130).

ಈ ರೀತಿಯಾಗಿ ಬೋಧಿಸತ್ವರು ತಮ್ಮ ತಾಳ್ಮೆ ಅಥವಾ ಸಹನೆಯ ***ಪಾರಮಿ***ಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಕೆಲಸಮಾಡಿದರು. ತಮ್ಮ ಹತ್ತಿರದವರೂ ಮತ್ತು ಪ್ರೀತಿಪಾತ್ರರೂ ತಮ್ಮ ***ಖಂತಿ ಪಾರಮಿ***ಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಬೋಧಿಸತ್ವರು ಮಾಧ್ಯಮವಾದರು.

### ಪ್ರೀತಿಯ ಪತ್ನಿಯ ಸಾವು

ಬೋಧಿಸತ್ವರ ಮತ್ತೊಂದು ಜನ್ಮದಲ್ಲಿ, ಅವರ ಪತ್ನಿ, ಸುಂದರವಾದ ಯುವತಿ, ಕಾಯಿಲೆ ಬಿದ್ದು ಸತ್ತು ಹೋಗುತ್ತಾಳೆ. ಅಂತಹ ಸುಂದರವಾದ ಹೆಣ್ಣುಮಗಳ ಶವವನ್ನು ನೋಡಿ ಸುತ್ತ ಮುತ್ತಲಿನ ಜನ ದುಃಖಿತರಾಗುತ್ತಾರೆ. ಆದರೆ ತಮ್ಮ ಅತ್ಯಂತ ಪ್ರೀತಿಯ, ಪ್ರಾಯದ ಹೆಂಡತಿ ಸತ್ತು ಮಲಗಿರುವುದನ್ನು ನೋಡಿಯೂ ಬೋಧಿಸತ್ವರು ಶಾಂತವಾಗಿದ್ದರು ಮತ್ತು ಸ್ತಿಮಿತದಲ್ಲಿದ್ದರು. ಅನೇಕ ವೇಳೆ ಅಂತಹ ಪರಿಸ್ಥಿತಿಯಲ್ಲಿ ಗಂಡನಾದವನು ಏನನ್ನೂ ತಿನ್ನದೆ, ಕುಡಿಯದೆ, ತಮ್ಮ ನಿತ್ಯದ ಕೆಲಸಗಳನ್ನೂ ಮಾಡದೆ ದುಃಖದಲ್ಲಿ ಮುಳುಗಿ ಗೋಳಾಡುತ್ತಾ ಸಮಾಧಿ ಸುತ್ತ ಸುತ್ತುವುದನ್ನು ಕಂಡಿದ್ದೇವೆ.

ಆದರೆ ಬೋಧಿಸತ್ವರು ಸಂಪೂರ್ಣ ಶಾಂತಿಯಿಂದಿದ್ದರು. ಇಷ್ಟೊಂದು ಶಾಂತಿಯಿಂದಿರಲು ಹೇಗೆ ಸಾಧ್ಯ ಎಂದು ಕೇಳಿದ್ದಕ್ಕೆ ಅವರು ಹೇಳಿದ್ದು: ಯಾವುದು ಬೇರ್ಪಡಬೇಕೋ ಅದು ಇಂದಲ್ಲ ನಾಳೆ ಬೇರ್ಪಡಲೇ ಬೇಕು. ಪ್ರತಿಯೊಬ್ಬರೂ ಸಾಯಲೇಬೇಕು. ಇದು ಬದಲಾಗದ ನಿಯಮ. ಅವಳು ಬದುಕಿದ್ದಾಗ ನನ್ನ ಹೆಂಡತಿಯಾಗಿದ್ದಳು. ನನ್ನ ಅವಶ್ಯಕತೆಗಳನ್ನು ನೋಡಿಕೊಂಡಳು. ನಾನೂ ಅವಳನ್ನು ನೋಡಿಕೊಂಡೆ. ಈಗ ಸತ್ತ ಮೇಲೆ ಇನ್ನೊಂದು ಲೋಕದಲ್ಲಿ ಮತ್ಯಾರೋ ಆಗಿ ಜನಿಸುತ್ತಾಳೆ. ಈಗ ನಮ್ಮಿಬ್ಬರ ಮಧ್ಯ ಯಾವ ಬಂಧನವಿದೆ? ಅಳುವುದು ನನಗಾಗಲಿ ಅಥವಾ ಅವಳಿಗಾಗಲಿ ಸಹಾಯ ಮಾಡುವುದಿಲ್ಲ.

ಈ ರೀತಿಯಾಗಿ ಬೋಧಿಸತ್ವರು ಈ ಜನ್ಮದಲ್ಲಿ ***ಖಂತಿ ಪಾರಮಿ***ಯನ್ನು ಪೋಷಿಸಿಕೊಂಡರು.

### ಅಣ್ಣನ ಸಾವು

ಮತ್ತೊಂದು ಜನ್ಮದಲ್ಲಿ ಬೋಧಿಸತ್ವರು ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರು. ಕಾಲಕ್ರಮದಲ್ಲಿ ಅವರ ತಂದೆ ತಾಯಿ ಕಾಲವಾದರು. ಕುಟುಂಬವು ಅಣ್ಣನನ್ನು ಅವಲಂಬಿಸಿತು. ಕುಟುಂಬದವರನ್ನು ಮತ್ತು ಕುಟುಂಬದ ವ್ಯವಹಾರವನ್ನು ಅಣ್ಣ ನೋಡಿಕೊಳ್ಳುತ್ತಿದ್ದರು. ದುರದೃಷ್ಟವಶಾತ್ ಅವರೂ ಕಾಯಿಲೆಯಿಂದ ಸತ್ತು ಹೋದರು. ಈ ದುರಂತವನ್ನು ಬೋಧಿಸತ್ವರು ಧೈರ್ಯದಿಂದ ತಾಳಿಕೊಂಡರು. ಅಳುವುದು ಯಾರಿಗೂ ಸಹಾಯ ಮಾಡುವುದಿಲ್ಲ, ತನ್ನ ಸತ್ತ ಅಣ್ಣನಿಗೂ ಸಹಾಯಮಾಡುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು ಮತ್ತು ಅಳುವುದು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತದೆ ಎಂಬುದು ತಿಳಿದಿತ್ತು. ಇಂತಹ ದುಃಖದ ಪರಿಸ್ಥಿತಿಯಲ್ಲಿ ಹೇಗೆ ಅಷ್ಟೊಂದು ಶಾಂತಿ ಮತ್ತು ಸಮಾಧಾನದಿಂದ ಇರಲು ಸಾಧ್ಯ ಎಂದು ಜನಗಳು ಕೇಳಿದಾಗ, 'ಬದುಕಿರುವ ಪ್ರತಿಯೊಂದು ಜೀವಿಗೂ ಸಾವು ಬದಲಾವಣೆ ಮಾಡಲಾಗದ ನಿಯಮ. ಸಮಯ ಕಳೆದಂತೆ ದೇಹವು ವಿಘಟನೆಯಾಗುವುದು ಅನಿವಾರ್ಯ. ಅಳುವುದರಿಂದ, ರೋದಿಸುವುದರಿಂದ ಏನೂ ಉಪಯೋಗವಿಲ್ಲ.' ಹೀಗೆ ಧರ್ಮದ ಮಾತುಗಳಿಂದ ಎಲ್ಲರನ್ನೂ ಸಮಾಧಾನಪಡಿಸಿದರು.

### ತಾತನ ಸಾವು

ಒಂದು ಬಾರಿ ಬೋಧಿಸತ್ವರು ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರು. ಅವರು ಯುವಕರಾಗಿದ್ದಾಗ ಅವರ ಅಜ್ಜ ತೀರಿಕೊಂಡರು. ಅಂತಹ ದುಃಖದ ಸಮಯದಲ್ಲಿ ಅವರು ಶಾಂತಿ ಮತ್ತು ಸಮಚಿತ್ತತೆಯಿಂದಿದ್ದರು. ಆದರೆ ಅವರ ತಂದೆ ತುಂಬಾ ತಳಮಳಕ್ಕೀಡಾಗಿದ್ದರು. ಅವರನ್ನು ಸಮಾಧಾನಪಡಿಸಲು ಸಾಧ್ಯವಾಗಲಿಲ್ಲ. ದಹನ ಕ್ರಿಯೆಯ ನಂತರ ತಂದೆಯವರು ಅಲ್ಲಿ ಒಂದು ಮಂಟಪ ಕಟ್ಟಿ, ಚಿತಾಭಸ್ಮವನ್ನಿಟ್ಟು, ಯಾವಾಗಲೂ ಅಲ್ಲಿ ಕುಳಿತು ರೋದಿಸುತ್ತಿದ್ದರು. ಅವರನ್ನು ಸಂತಯಿಸಲು ಬೋಧಿಸತ್ವರು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಆಗ ಬೋಧಿಸತ್ವರು ಒಂದು ಉಪಾಯ ಮಾಡಿದರು. ಒಂದು ಸತ್ತ ಎತ್ತನ್ನು ತಂದು ಅದರ ಮುಂದೆ ಹಸಿಹುಲ್ಲು ಹಾಕಿ, ಕುಡಿಯಲು ನೀರಿಟ್ಟರು.

ನಂತರ, ಎದ್ದು ಹುಲ್ಲು ತಿನ್ನುವಂತೆ, ನೀರು ಕುಡಿಯುವಂತೆ ಸತ್ತ ಎತ್ತನ್ನು ಪರಿಪರಿಯಾಗಿ ಬೇಡುತ್ತಾ ಅಳಲಾರಂಭಿಸಿದರು. ಇದನ್ನು ನೋಡಿದ ಅನೇಕ ಜನರು, ಅವನು ಮಾಡುತ್ತಿರುವ ಕೆಲಸದ ನಿರುಪಯುಕ್ತತೆಯನ್ನು ವಿವರಿಸಿದರು. ಆದರೆ ಬೋಧಿಸತ್ವರು ಕೇಳಲಿಲ್ಲ. ಇವನಿಗೆ ಬುದ್ಧಿಭ್ರಮಣೆಯಾಗಿದೆ ಎಂದು ಅಂದುಕೊಂಡರು.

ಮಗನ ಹುಚ್ಚುತನವನ್ನು ನೋಡಿ, ಬೋಧಿಸತ್ವರ ತಂದೆಯು ತಳಮಳಗೊಂಡರು. ಸ್ವಸ್ಥ ಬುದ್ಧಿಯ ಮತ್ತು ತಿಳುವಳಿಕೆಯುಳ್ಳ ಮಗ ಹೇಗೆ ಹುಚ್ಚನಾದ ಎಂದು ತಂದೆಗೆ ಆಶ್ಚರ್ಯವಾಯಿತು. ಸತ್ತ ಎತ್ತನ್ನು ಎಬ್ಬಿಸಿ ಆಹಾರ ತಿನ್ನಿಸುವ ಪ್ರಯತ್ನಕ್ಕೆ ಅರ್ಥವಿಲ್ಲ ಎಂದು ತಂದೆಯು ಬೋಧಿಸತ್ವರಿಗೆ ವಿವರಿಸಿದರು. ಆಗ ಬೋಧಿಸತ್ವರು, 'ಅಪ್ಪ, ಸುಮ್ಮನೆ ನೋಡು, ಎತ್ತಿನ ತಲೆ, ಮುಖ, ಕಾಲುಗಳು, ದೇಹವೆಲ್ಲಾ ಸರಿಯಾಗಿದೆ. ನನ್ನ ಕೋರಿಕೆಗಳಿಂದ ಅದು ಖಂಡಿತವಾಗಿಯೂ ಏಳುತ್ತದೆ. ಆದರೆ, ದೇಹ ದಹಿಸಲ್ಪಟ್ಟು, ಬೂದಿ ಮತ್ತು ಕೆಲವು ಮೂಳೆಯ ತುಂಡುಗಳನ್ನಿಟ್ಟುಕೊಂಡು ಕೇವಲ ನಿಮ್ಮ ತಂದೆಯು ಬದುಕಿ ಬರಲಿ ಎಂದು ನೀವು ರೋದಿಸುತ್ತಿದ್ದೀರಿ. ಇದಕ್ಕೆ ಹೋಲಿಸಿದರೆ, ಖಂಡಿತವಾಗಿ ನನ್ನ ಎತ್ತು ಬದುಕಿಬರುವ ಸಾಧ್ಯತೆ ಹೆಚ್ಚಿದೆ' ಎಂದರು. ಈ ಮಾತುಗಳು ತಂದೆಯನ್ನು ಅಲ್ಲಾಡಿಸಿದವು. ಅವರಿಗೆ ಅರಿವು ಮೂಡಿತು. 'ನಾನೇನು ಮಾಡುತ್ತಿದ್ದೇನೆ' ಎಂದು ತಮಗೆ ತಾವೇ ಅಂದುಕೊಂಡು ಅಳುವುದನ್ನು, ಗೋಳಾಡುವುದನ್ನು ನಿಲ್ಲಿಸಿದರು. ಈ ರೀತಿಯಾಗಿ ಬೋಧಿಸತ್ವರು ತಮ್ಮ ***ಖಂತಿ ಪಾರಮಿ***ಯನ್ನು ವೃದ್ಧಿಸಿಕೊಂಡರು ಮತ್ತು ತಮ್ಮ ತಂದೆಗೂ ಧರ್ಮದಲ್ಲಿ ಬೆಳೆಯಲು ಸಹಾಯ ಮಾಡಿದರು.

### ತಂದೆಯ ಮರಣ

ಲೆಕ್ಕವಿಲ್ಲದಷ್ಟು ಜನ್ಮಗಳ ಸರಣಿಯಲ್ಲಿ, ಒಮ್ಮೆ ಬೋಧಿಸತ್ವರು ದಶರಥನ ಮಗ ರಾಮನಾಗಿ ಜನ್ಮ ತಳೆದರು. ತಂದೆಯ ಆಜ್ಞೆಯಂತೆ ರಾಮನು ಅರಮನೆಯನ್ನು ತ್ಯಜಿಸಿ ಸೀತೆ ಮತ್ತು ಲಕ್ಷ್ಮಣರೊಂದಿಗೆ ಕಾಡಿಗೆ ಹೋಗುತ್ತಾನೆ. ಸ್ವಲ್ಪ ದಿನಗಳ ನಂತರ ಅವನ ತಂದೆ, ರಾಜ, ಮರಣ ಹೊಂದುತ್ತಾನೆ. ರಾಮನ ತಮ್ಮ, ಭರತ, ಕಾಡಿಗೆ ಹೋಗಿ ಶ್ರೀರಾಮನನ್ನು ಅಯೋಧ್ಯೆಗೆ ಮರಳಿ ರಾಜ್ಯಭಾರವಹಿಸಿಕೊಳ್ಳಲು ವಿನಂತಿಸುತ್ತಾನೆ. ಬೋಧಿಸತ್ವ ರಾಮನು ತನ್ನ ತಂದೆಯ ಮರಣದ ಸುದ್ದಿಯನ್ನು ಕೇಳಿ ಕಿಂಚಿತ್ತೂ ಕ್ಷೋಭೆಗೊಳ್ಳಲಿಲ್ಲ. ಕಾಡಿನಿಂದ ಹಣ್ಣು ಹೂವುಗಳನ್ನು ತರಲು ಹೋಗಿದ್ದ ಲಕ್ಷ್ಮಣ ಮತ್ತು ಸೀತೆಯು ಹಿಂದಿರುಗಿದಾಗ ಬಹಳ ಮೃದುವಾಗಿ ಈ ಸಾವಿನ ಸುದ್ದಿಯನ್ನು ಅವರಿಗೆ ತಿಳಿಸಿದನು. ಏಕೆಂದರೆ, ಅವನು ಸಹಿಸಿಕೊಂಡಂತೆ ಅವರು ಸಹಿಸಿಕೊಳ್ಳುವುದು ಕಷ್ಟ ಎಂಬುದನ್ನು ಶ್ರೀರಾಮ ಅರಿತಿದ್ದ.

ನಿರೀಕ್ಷಿಸಿದ್ದಂತೆ, ಸೀತಾ ಮತ್ತು ಲಕ್ಷ್ಮಣ ಈ ಸುದ್ದಿ ಕೇಳಿ ಕಡುಸಂಕಟದಲ್ಲಿ ಮುಳುಗಿದರು. ಕಣ್ಣೀರುಗರೆಯುತ್ತಾ ರೋದಿಸಿದರು. ಅಯೋಧ್ಯೆಯಿಂದ ಭರತನ ಜೊತೆ ಬಂದ ಪ್ರಜೆಗಳೂ ಜೋರಾಗಿ ಅಳುತ್ತಿದ್ದರು. ಆಗ ***ಖಂತಿ ಪಾರಮೀ*** ಸಂಪನ್ನನಾಗಿದ್ದ ಬೋಧಿಸತ್ವ ರಾಮನು, ಕರುಣೆ ತುಂಬಿದ ವಿವೇಕದ ಮಾತುಗಳನ್ನಾಡಿದ. 'ನಮ್ಮ ಕಣ್ಣು ಇಂಗುವಷ್ಟು ಅತ್ತರೂ ಸತ್ತವರನ್ನು ಮರಳಿ ತರಲು ಸಾಧ್ಯವಿಲ್ಲ. ಅಳುವುದು ಯಾವಾಗಲೂ ಸಹಾಯ ಮಾಡುವುದಿಲ್ಲ. ಯಾರು ಅಳುತ್ತಾರೋ ಮತ್ತು ಆ ಮುಖೇನ ಇತರರನ್ನೂ ಅಳುವಂತೆ ಮಾಡುತ್ತಾರೋ, ಅವರು ತಮಗೆ ಮತ್ತು ಇತರರಿಗೆ ಹಾನಿಯನ್ನು ಮಾತ್ರ ಮಾಡುತ್ತಾರೆ. ಅಳುವುದು ಸತ್ತವರಿಗೂ ಯಾವುದೇ ರೀತಿಯಿಂದಲೂ ಸಹಾಯ ಮಾಡುವುದಿಲ್ಲ. ಆದ್ದರಿಂದ ಅಂತಹ ಸಮಯದಲ್ಲಿ, ನೋವು ಬಂದ ತಕ್ಷಣ ಅದನ್ನು ನಿವಾರಿಸಿಕೊಳ್ಳುವುದೇ ಬುದ್ಧಿವಂತಿಕೆ – ಒಬ್ಬ ವ್ಯಕ್ತಿಯು ತನ್ನ ಮನೆಗೆ ಬೆಂಕಿ ಹತ್ತಿದ ತಕ್ಷಣ ಅದನ್ನು ಆರಿಸುವಂತೆ.

ಬುದ್ಧಿವಂತಿಕೆಯ ಈ ಮಾತುಗಳನ್ನು ಕೇಳಿದ ಮೇಲೆ ಜನರು ಅಳುವುದನ್ನು ನಿಲ್ಲಿಸಿದರು. ಈ ರೀತಿಯಾಗಿ ಬೋಧಿಸತ್ವರು ತಮ್ಮ ***ಖಂತಿ ಪಾರಮಿ***ಯನ್ನು ಪಕ್ವಗೊಳಿಸುವುದನ್ನು ಮುಂದುವರಿಸಿದರು ಮತ್ತು ಇತರರನ್ನೂ ಪ್ರೋತ್ಸಾಹಿಸಿದರು.

**(ಜಾತಕ ಕತೆಗಳಿಂದ ಆಯ್ಕೆಮಾಡಿಕೊಳ್ಳಲಾಗಿದೆ)**

ಪ್ರೀತಿಯ ಧ್ಯಾನಸಾಧಕರೇ!

ವ್ಯಕ್ತಿಯ ಜೀವನದಲ್ಲಿ ಇಷ್ಟವಿಲ್ಲದ ಘಟನೆಗಳು ನಡೆಯುತ್ತಲೇ ಇರುತ್ತವೆ. ಪ್ರೀತಿ ಪಾತ್ರರನ್ನು ಅಥವಾ ರಕ್ಷಿಸಿಟ್ಟುಕೊಂಡದ್ದನ್ನು ಕಳೆದುಕೊಳ್ಳಬಹುದು. ನಾವೆಲ್ಲರೂ ಸಹನೆಯಿಂದ ***ಖಂತಿ ಪಾರಮಿ***ಯಲ್ಲಿ, ಬೆಳೆಯೋಣ. ಬೋಧಿಸತ್ವರ ಬೆಲೆಕಟ್ಟಲಾಗದ ಅನುಭವಗಳು, ನಮಗೆ ನೀಡುವ ಹೋಲಿಕೆ ಮಾಡಲಾಗದ ಪಾಠಗಳಿಂದ ಸಹನೆಯನ್ನು ಮತ್ತು ಇತರೆ ಪರಿಪೂರ್ಣತೆಗಳನ್ನು ವೃದ್ಧಿಮಾಡಿಕೊಳ್ಳುವುದನ್ನು ಕಲಿಯೋಣ.

ಕಲ್ಯಾಣಮಿತ್ರ
ಎಸ್. ಎನ್. ಗೋಯಂಕ

## ಗೋಯಂಕಾಜಿಯವರೊಂದಿಗೆ ಪ್ರಶ್ನೋತ್ತರಗಳು

**ಪ್ರಶ್ನೆ:** ರಾಗ, ದ್ವೇಷ ಎರಡೂ ಬೇಡ ಎಂದು ನೀವು ನಮಗೆ ಹೇಳುತ್ತೀರಿ. ಹಾಗಾದರೆ ನಾವು ಜೀವನ ನಡೆಸುವುದು ಹೇಗೆ?

**ಗೋಯಂಕಾಜಿ:** ಅದನ್ನು ಪ್ರಯತ್ನಿಸಿ! ಜೀವನ ಕೇವಲ ಉತ್ತಮವಾಗುತ್ತದೆ, ನಿಷ್ಕ್ರಿಯವಾಗುವುದಿಲ್ಲ. "ನಾವು ಅಹಿಂಸಾವಾದಿಗಳು, ತರಕಾರಿಗಳಿದ್ದಂತೆ, ಯಾರು ಬೇಕಾದರೂ ನಮ್ಮನ್ನು ಕತ್ತರಿಸಬಹುದು" ಎಂದು ನಿಷ್ಕ್ರಿಯರಾಗುವಂತೆ ಧರ್ಮವು ನಮಗೆ ಬೋಧಿಸುವುದಿಲ್ಲ. ಯಾರಾದರೂ ವ್ಯಕ್ತಿ ನಮ್ಮ ವಿರುದ್ಧ ತಪ್ಪಾಗಿ ವರ್ತಿಸಿದರೆ, ನಾವು ಆಗ ಅವನಿಗೆ ಅನುಕಂಪದಿಂದ ತಿಳಿಹೇಳುತ್ತೇವೆ. ಅವನು ಅದನ್ನು ಮುಂದುವರಿಸಿದರೆ ದೃಢವಾಗಿ ಹೇಳುತ್ತೇವೆ ಅಥವಾ ಕಠಿಣ ಕ್ರಮಕೈಗೊಳ್ಳುತ್ತೇವೆ. ಆದರೆ ನಮ್ಮೊಳಗೆ ಅವನ ಬಗ್ಗೆ ಕೋಪವಿಲ್ಲ, ಕೇವಲ ಅನುಕಂಪವಿದೆ. ನಾವು ಅವನ ಮೇಲೆ ಕೋಪಗೊಂಡರೆ, ನಾವು ಸರಿಯಾದ ಮಾರ್ಗದಲ್ಲಿಲ್ಲ. ಪ್ರೀತಿ ತುಂಬಿದ ಕರುಣೆಯಿಂದ ದೃಢವಾಗಿ ಅವನನ್ನು ತಡೆಯುತ್ತೇವೆ. ಆದರೆ ಕೋಪವಿರುವುದಿಲ್ಲ. ಇದು ನಮ್ಮ ಲಾಭಕ್ಕಾಗಿ ಅಷ್ಟೇ ಅಲ್ಲ, ಅವನ ಕ್ಷೇಮಕ್ಕಾಗಿಯೂ ಹೌದು. ಏಕೆಂದರೆ, ಅವನು ತನ್ನ ನಕಾರಾತ್ಮಕ ನಡವಳಿಕೆಯನ್ನು ಮುಂದುವರಿಸಿದರೆ, ತನಗೂ ದುಃಖ ಉಂಟುಮಾಡಿಕೊಳ್ಳುತ್ತಾನೆ ಮತ್ತು ಇತರರಿಗೂ ದುಃಖ ಉಂಟುಮಾಡುತ್ತಾನೆ. ಸರಿಯಾಗಿ ಬದುಕುವುದನ್ನು ವಿಪಶ್ಯನ ನಮಗೆ ಕಲಿಸುತ್ತದೆ.

**ಪ್ರಶ್ನೆ:** ವಿಪಶ್ಯನ ಧ್ಯಾನಕ್ಕೂ ಮತ್ತು ಸಮ್ಮೋಹಿನಿಗೂ (hypnotism) ಏನು ವ್ಯತ್ಯಾಸ. ಈ ಕಾಲದಲ್ಲಿ ಅವೆರಡೂ ಪ್ರಸ್ತುತವೇ?

**ಗೋಯಂಕಾಜಿ:** ವಿಪಶ್ಯನ ಮತ್ತು ಸಮ್ಮೋಹಿನಿ ಪರಸ್ಪರ ತೀರ ಭಿನ್ನವಾಗಿವೆ. ವಿಪಶ್ಯನವು ನಮ್ಮನ್ನು ಭ್ರಾಂತಿಯಿಂದ ಎಚ್ಚರಿಸಿ ವಾಸ್ತವತೆಗೆ ತೆಗೆದುಕೊಂಡು ಹೋಗುತ್ತದೆ. ಸಮ್ಮೋಹಿನಿಯು ನಮ್ಮನ್ನು ಕಲ್ಪನಾ ಲೋಕಕ್ಕೆ ತೆಗೆದುಕೊಂಡು ಹೋಗುತ್ತದೆ. ಸಮ್ಮೋಹಿನಿಯು ಕಲ್ಪನೆಯ ಮುಖೇನ ನಮ್ಮನ್ನು ಒಂದು ಗೊತ್ತಾದ ಸ್ಥಿತಿಗೆ ಕೊಂಡೊಯ್ಯುತ್ತದೆ. ಆದರೆ ವಿಪಶ್ಯನವು ಕಲ್ಪನೆಯಿಂದ ನಮ್ಮನ್ನು ಹೊರತಂದು ಸತ್ಯವನ್ನು ತೋರಿಸುತ್ತದೆ. ಸತ್ಯ ಹೇಗಿದೆಯೋ ಹಾಗೆಯೇ ನೋಡುವುದನ್ನು, ಅದರ ನಿಜವಾದ ಗುಣವನ್ನು, ಅಶಾಶ್ವತ ಗುಣವನ್ನು ತಿಳಿಯುವುದನ್ನು ಕಲಿಸುತ್ತದೆ. ಈ ರೀತಿಯಾಗಿ ಅದರ ಅಶಾಶ್ವತ ಗುಣವನ್ನು ಕಂಡು, ಹಿಡಿದಿಟ್ಟುಕೊಳ್ಳಲು ಏನೂ ಇಲ್ಲ ಎಂಬುದನ್ನು ಕಲಿಯುತ್ತಾರೆ. ಆಗ ವ್ಯಕ್ತಿಗಳು ತಮ್ಮ ಬಂಧನಗಳು ಮತ್ತು ದ್ವೇಷದಿಂದ ಹೊರಬರುತ್ತಾರೆ. ಸಮ್ಮೋಹಿನಿಯಲ್ಲಿ ಇಂತಹ ಗಂಭೀರವಾದ ಕೆಲಸವನ್ನು ಮಾಡಲು ಸಾಧ್ಯವಿಲ್ಲ.

**ಪ್ರಶ್ನೆ:** ವಿಪಶ್ಯನದಲ್ಲಿ ಶರೀರ ಮತ್ತು ಆತ್ಮವನ್ನು ಪ್ರತ್ಯೇಕ ಎಂದು ಪರಿಗಣಿಸಲಾಗುತ್ತದೆ ಎಂದು ಊಹಿಸಿಕೊಂಡಿದ್ದೇನೆ. ಯಾವಾಗಲೂ ಅವು ಆ ರೀತಿ ಇರಲು ಸಾಧ್ಯವೇ?

**ಗೋಯಂಕಾಜಿ:** ನಿಮ್ಮ ಈ ಹೇಳಿಕೆಯ ಹಿಂದಿರುವ ಯಾವುದೇ ಸೈದ್ಧಾಂತಿಕ ನಂಬಿಕೆಗಳನ್ನು ಒಂದು ನಿಮಿಷ ಪಕ್ಕಕ್ಕಿಡೋಣ. ನಮ್ಮ ಮುಂದಿರುವ ಎರಡು ಸತ್ಯಗಳ ಕಡೆ ಗಮನ ಕೊಡೋಣ. ಅವು, **ಶಾಶ್ವತ** ಮತ್ತು **ಅಶಾಶ್ವತ** ಸತ್ಯಗಳು. 'ಶಾಶ್ವತ'ದ ಕ್ಷೇತ್ರ ನಿರಂತರವಾದದ್ದು, ಪರಿಪೂರ್ಣವಾದದ್ದು. ಯಾರಾದರೂ ಅದನ್ನು ಆತ್ಮ, ದೇವರು, ನಿಬ್ಬಾಣದ ಸ್ಥಿತಿ ಅಥವಾ ಮೋಕ್ಷ ಎಂದು ಕರೆಯಬಹುದು. ಯಾವುದೇ ಹೆಸರಿನಿಂದ ಅದನ್ನು ಗುರುತಿಸಲಿ, ಅದು ಶಾಶ್ವತವಾದ ಸ್ಥಿತಿ, ಅಲ್ಲಿ ಏನೂ ಬದಲಾಗುವುದಿಲ್ಲ; ಅದು ಯಾವಾಗಲೂ ಇದ್ದಂತೆಯೇ ಇರುತ್ತದೆ. ಉಳಿದದ್ದೆಲ್ಲವೂ 'ಅಶಾಶ್ವತ' ಕ್ಷೇತ್ರ. ಅಲ್ಲಿ ಪ್ರತಿಯೊಂದೂ ಬದಲಾಗುತ್ತಿರುವ ಸ್ಥಿತಿಯಲ್ಲಿರುತ್ತದೆ, ಯಾವಾಗಲೂ ಬದಲಾಗುತ್ತಿರುತ್ತದೆ, ನಿರಂತರವಾದ ಉತ್ಪತ್ತಿ ಮತ್ತು ನಾಶ. ಎರಡರ ಮಧ್ಯೆ ಇರುವ ವ್ಯತ್ಯಾಸವನ್ನು ಬುದ್ಧಿಯ ಮಟ್ಟದಲ್ಲಿ ಅರ್ಥಮಾಡಿಕೊಳ್ಳುವುದಲ್ಲ, ಅದನ್ನು ಪ್ರತ್ಯಕ್ಷ ಅನುಭವಿಸಬೇಕು.

ರಾಗ ಮತ್ತು ದ್ವೇಷದ ಸಂಗ್ರಹವನ್ನು ವ್ಯಕ್ತಿಯು ಅನುಗಾಲವೂ ಹೆಚ್ಚು ಮಾಡಿಕೊಳ್ಳುತ್ತಾ ಬಂದಿದ್ದಾನೆ. ಈಗ ವಿಪಶ್ಯನ ಸಾಧನೆಯಿಂದ ವ್ಯಕ್ತಿಯು ಅಂತಿಮವಾಗಿ ಅಶಾಶ್ವತದ ಕ್ಷೇತ್ರವನ್ನು ದಾಟಿ ಹೋಗುವ ತನಕ ತನ್ನ ಮಲಿನತೆಗಳ ಸಂಗ್ರಹವನ್ನು ಕಡಿಮೆ ಮಾಡುತ್ತಾ ಮನಃಶುದ್ಧಿ ಮಾಡಿಕೊಳ್ಳುತ್ತಾನೆ. ಆಗ ಮಾತ್ರ ವ್ಯಕ್ತಿಯು ಪರಿಪೂರ್ಣವಾದದ್ದನ್ನು, ಶಾಶ್ವತವಾದದ್ದನ್ನು, ಯಾವಾಗಲೂ ಬದಲಾಗದೇ ಇರುವುದನ್ನು ಅನುಭವಿಸುತ್ತಾನೆ. ಈ ಸ್ಥಿತಿಯನ್ನು ಪದಗಳಲ್ಲಿ ಹಿಡಿದಿಡುವುದು ಸಾಧ್ಯವಿಲ್ಲದ್ದರಿಂದ, ಇದನ್ನು ಯಾವಾಗಲೇ ಆದರೂ ಪದಗಳಲ್ಲಿ ವಿವರಿಸಿದರೆ, ಅದು ತಪ್ಪುದಾರಿಗೆಳೆಯುತ್ತದೆ. ಅದನ್ನು ಅನುಭವಿಸಲೇ ಬೇಕು ಮತ್ತು ವಿಪಶ್ಯನ ಆ ಅನುಭವವನ್ನು ಕೊಡಬಲ್ಲುದು. ಆ ಸ್ಥಿತಿ ತಲುಪಲು ನಿಸ್ಸಂದೇಹವಾಗಿ ಸಮಯ ಹಿಡಿಯುತ್ತದೆ. ಏಕೆಂದರೆ ನಾವು ಸಂಗ್ರಹಿಸಿಟ್ಟುಕೊಂಡಿರುವ ಮಲಿನತೆಗಳ ಸಂಗ್ರಹ ಎಷ್ಟಿದೆ ಎಂದು ನಮಗೆ ಗೊತ್ತಿಲ್ಲ ಮತ್ತು ಆ ಸಂಗ್ರಹವನ್ನು ತೊಡೆದುಹಾಕಲು ಎಷ್ಟು ಸಮಯ ಹಿಡಿಯುತ್ತದೆ ಎಂಬುದೂ ನಮಗೆ ತಿಳಿದಿಲ್ಲ. ಆದರೆ ಅಶಾಶ್ವತತೆಯಿಂದ ಶಾಶ್ವತದ ಕಡೆಗಿನ ಪ್ರಯಾಣ ಈಗ ಪ್ರಾರಂಭವಾಗಬೇಕು.

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.**

## ವಿಪಶ್ಯನ ಧ್ಯಾನ ಸಾಧಕರ ಗಮನಕ್ಕೆ

ಧಮ್ಮ ಬಂಧುಗಳೇ, ಪಶ್ಚಿಮ ಘಟ್ಟಗಳ ಪರಿಶುದ್ಧ ವಾತಾವರಣದಲ್ಲಿ, ಪಟ್ಟಣದ ಸದ್ದು-ಗದ್ದಲದಿಂದ ದೂರವಿರುವ, ಶಿವಪುರ (ಉಡುಪಿ) ರಕ್ಷಿತ ಅರಣ್ಯದ ಪಕ್ಕ ಒಂದು ಪ್ರಶಾಂತ ಜಾಗವನ್ನು ವಿಪಶ್ಯನ ಧ್ಯಾನ ಕೇಂದ್ರಕ್ಕೆ ಆಯ್ಕೆ ಮಾಡಲಾಗಿದೆ. ಸುಮಾರು 50 ಸಾಧಕರು ಧ್ಯಾನಮಾಡುವಂತಹ ಧ್ಯಾನಮಂದಿರವಿದ್ದು, ಪ್ರತಿ ತಿಂಗಳು 2ನೇ ಭಾನುವಾರ ಒಂದು ದಿನದ ಶಿಬಿರ ನಡೆಸಲಾಗುತ್ತಿದೆ. ಪ್ರಾದೇಶಿಕ ವಿಪಶ್ಯನ ಆಚಾರ್ಯರುಗಳಾದ ಶ್ರೀಮತಿ ಸಬ್ರೀನಾ ಕಟಕಮ್ ಮತ್ತು ಮೋಹನರಾಜ್ ಅಡ್ಡ ಅವರನ್ನೊಳಗೊಂಡು ಹಳೆಯ ಸಾಧಕರು ಈಗಾಗಲೇ ಎರಡು ಬಾರಿ ತಪೋದಾನ ಮಾಡಿದ್ದಾರೆ. ಹಳೆಯ ಸಾಧಕರಿಂದ ತಪೋದಾನ ನಿರಂತರವಾಗಿ ನಡೆಯುತ್ತಿದೆ. ಜಾಗವನ್ನು ಕರಾವಳಿ ವಿಪಶ್ಯನ ಟ್ರಸ್ಟಿಗೆ ಡಿಸೆಂಬರ್ 2018ರೊಳಗೆ ಹಣಪಾವತಿ ಮಾಡಿ ನೋಂದಾಯಿಸಿಕೊಳ್ಳಬೇಕಾಗಿದೆ.

ಈ ಜಾಗದ ಕ್ರಯ 38.52 ಲಕ್ಷ + ನೋಂದಣಿ ಶುಲ್ಕ. ಸುಮಾರು 100 ಧ್ಯಾನ ಸಾಧಕರಿಗೆ ವ್ಯವಸ್ಥೆ ಕಲ್ಪಿಸಲು ಸುಮಾರು 3ಕೋಟಿ ರೂಪಾಯಿ ಖರ್ಚಾಗುವ ಅಂದಾಜಿದೆ. ಹಳೆಯ ಸಾಧಕರು ಈಗಾಗಲೇ 20ಲಕ್ಷ ರೂಪಾಯಿ ದಾನ ನೀಡಿದ್ದಾರೆ. ಹಳೆಯ ಸಾಧಕರು ಈ ಧ್ಯಾನ ಕೇಂದ್ರ ನಿರ್ಮಾಣದ ಕೆಲಸದಲ್ಲಿ ವಿವಿಧ ರೀತಿಯಲ್ಲಿ ಭಾಗಿಗಳಾಗಿ ತಮ್ಮ ದಾನ ಪಾರಮೀಯನ್ನು ಬಲಗೊಳಿಸಿಕೊಳ್ಳುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಬ್ಯಾಂಕ್ ಖಾತೆಯ ವಿವರಗಳು :

ಖಾತೆದಾರರ ಹೆಸರು: Karavali Vipassana Research Centre
Bank : Canara Bank, Hebri
A/c No: 2502101016750
IFSC Code : CNRB0002502

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ಬಿ.ವಿ. ಪೈ– 9900736473/ 9481266076, ಜಯಂತ ಶೆಟ್ಟಿ – 9449773942, ಹೆಚ್. ರಾಮಪ್ಪಾಜಿ –9448814196, ಸುಧೀರ್ ಕುಮಾರ್ – 8746908376
Email : baburayavpai@gmail.com / sk.ajekar@gmail.com

**ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ಶಿಬಿರಗಳು :** ಶಾಲೆಗಳಲ್ಲಿ ಮಕ್ಕಳಿಗಾಗಿ ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ 70 ನಿಮಿಷದ ಆನಾಪಾನ ಧ್ಯಾನವನ್ನು ಹೇಳಿಕೊಡಲಾಗುತ್ತದೆ. ಸಂಪರ್ಕ ಸಂಖ್ಯೆಗಳು: 9880421155 / 9480581708 / 8762086089

## ಇತರೆ ಸ್ಥಳಗಳಲ್ಲಿ ಒಂದು ದಿನದ ಶಿಬಿರಗಳು

**ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 7829912733, 9060300558, 880519658. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506, **ಲೋಕಾಪುರ(ಬಾಗಲಕೋಟೆ):** ಮೊದಲ ಅಥವಾ ಎರಡನೇ ಭಾನುವಾರ ಸಂಪರ್ಕಿಸಿ: 9741275657

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2018** ಫೆಬ್ರವರಿ 28–11 ಮಾರ್ಚ್, 14–25, 4–15 ಏಪ್ರಿಲ್, 2–13 30ಮೇ–10ಜೂನ್, 13–24 ಜೂನ್, 27–8 ಜುಲೈ,11–22 ಜುಲೈ, 25–5 ಆಗಸ್ಟ್, 8–19, ಸೆಪ್ಟಂಬರ 1–12, 19–30.ಅಕ್ಟೋಬರ್ 10–21, 24–4 ನವೆಂಬರ್ 19–17, 21–2 ಡಿಸೆಂಬರ್ 5–16, 19–30. **ಮೂರು ದಿನದ ಶಿಬಿರ:** ಮಾರ್ಚ್ 29 ರಿಂದ ಏಪ್ರಿಲ್ 1. **ಎರಡು ದಿನದ ಶಿಬಿರ:** 25–27ಮೇ, 14–16ಸೆಪ್ಟಂಬರ್, 6–8ಅಕ್ಟೋಬರ್. **ಟೀನೇಜರ್ಸ್ ಕೋರ್ಸ್** (ವಯಸ್ಸು 15–19ವರ್ಷ)ಹೆಣ್ಣುಮಕ್ಕಳಿಗೆ ಮಾತ್ರ. ಮೇ16–24.**ಸತಿಪಟ್ಠಾನ ಶಿಬಿರಗಳು:** 18–27 ಏಪ್ರಿಲ್, 22–30 ಆಗಸ್ಟ್, **ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org;
website: www.dhamma.org.

## ವಾರದ ಒಂದು ಗಂಟೆಯ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಬೆಂಗಳೂರು: ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593. **ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ:**
**http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

ತೆರೆದ–ಅಂಚೆ

**ಮುದ್ರಿತ ವಿಷಯ**

ಗೆ, ______

______

______

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.